International Journal of Kannada Research
www.kannadajournal.com

ISSN: 2454–5813
IJSR 2017; 3(1): 94-98
© 2017 IJKS
www.kannadajournal.com
Received: 18-11-2016
Accepted: 19-12-2016

**ದೇವಿಕ.ಎಸ್**
ಸಂಶೋಧನಾ ವಿದ್ಯಾರ್ಥಿ/
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು–೧೦೪

**ಡಾ.ಪಿ.ಎಂ.ಗಂಗಾಧರಯ್ಯ**
ಮಾರ್ಗದರ್ಶಕರು ಹಾಗೂ
ಸಹಾಯಕ ಪ್ರಾಧ್ಯಾಪಕರು
ಡಾ.ಡಿ.ವಿ.ಗುಂಡಪ್ಪ ಕನ್ನಡ
ಅಧ್ಯಯನ ಕೇಂದ್ರ, ತುಮಕೂರು
ವಿಶ್ವವಿದ್ಯಾನಿಲಯ,
ತುಮಕೂರು

**Correspondence**
**ದೇವಿಕ.ಎಸ್**
ಸಂಶೋಧನಾ ವಿದ್ಯಾರ್ಥಿ/
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು–೧೦೪

# ನವೋದಯ ಸಾಹಿತ್ಯದಲ್ಲಿ ಪ್ರಕೃತಿಯ ವರ್ಣನ

**ದೇವಿಕ.ಎಸ್, ಡಾ.ಪಿ.ಎಂ.ಗಂಗಾಧರಯ್ಯ**

## ಪ್ರಸ್ತಾವನೆ

ನವೋದಯ ಸಾಹಿತ್ಯದ ಹರಹು ವಿಸ್ತಾರವಾದುದು. ಕತೆ, ಕಾದಂಬರಿ ಕವಿತೆ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಹರಡಿ ಕೊಂಡಿರುವುದರಿಂದ ಪ್ರಸ್ತುತ ಸಪ್ರಬಂಧದಲ್ಲಿ ಈ ಎಲ್ಲವನ್ನೂ ಹಿಡಿದಿಡುವುದು ಕಷ್ಟ ಸಾಧ್ಯ. ಈ ಕಾರಣದಿಂದ ಕಾವ್ಯವನ್ನು ಮಾತ್ರ ಅನುಲಕ್ಷಿಸಿ ಕನ್ನಡ ನವೋದಯ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯನ್ನು ಸಮೀಕ್ಷಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.
ಒಂದು ಭಾಷೆಯಲ್ಲಿನ ಗ್ರಂಥಗಳ ಸಮೂಹವನ್ನು ನಾವು ಸಾಹಿತ್ಯವೆಂದು ಕರೆಯುತ್ತೇವೆ. ಭಾಷಾ ಮಾಧ್ಯಮದ ಮೂಲಕ ಸೃಷ್ಟಿಗೊಂಡ ಕಲಾಕೃತಿಯಾಗಿದ್ದು ಇದನ್ನು ಶುದ್ಧ ಸಾಹಿತ್ಯ ಮತ್ತು ಶಾಸ್ತ್ರ ಸಾಹಿತ್ಯವೆಂದು ಎರಡು ವಿಭಾಗಗಳಾನ್ನಾಗಿ ಮಾಡಿ ಅಧ್ಯಯನ ನಡೆಸುತ್ತೇವೆ. ಶುದ್ಧ ಸಾಹಿತ್ಯವು ಹೃದಯಕ್ಕೆ ಸೇರಿದ್ದು ಶಾಸ್ತ್ರ ಸಾಹಿತ್ಯ ಬುದ್ಧಿಗೆ ಸಂಬಂಧಿಸಿದ್ದು. ಒಂದು ಕಲೆಯಾದರೆ ಇನ್ನೊಂದು ವಿಜ್ಞಾನವಾಗಿದೆ. ಅನುಭೂತಿಯೇ ಶುದ್ಧ ಸಾಹಿತ್ಯದ ಗುರಿ, ಜ್ಞಾನ ಪ್ರಸಾರವು ಶಾಸ್ತ್ರ ಸಾಹಿತ್ಯದ ಉದ್ದೇಶವಾಗಿದೆ. ಈ ಎರಡಕ್ಕೂ ನಿಕಟ ಸಂಬಂಧವಿದೆ. ಈ ಎರಡರ ಸಂಗಮದಿಂದ ಆಯಾ ಭಾಷೆಯ ಹಿರಿಮೆ ಹೆಚ್ಚುತ್ತದೆ. ಇವೆರಡೂ ಸಮಾನವಾಗಿ ಬೆಳೆದಾಗಲೇ ಆ ಭಾಷೆಯ ಮಹತ್ವವೂ ಹೆಚ್ಚುತ್ತದೆ.

**ಪ್ರೊ. ಡಿ.ಎಲ್ ನರಸಿಂಹಚಾರ್:** "ಸಾಹಿತ್ಯ ಚರಿತ್ರೆಯ ಸ್ವರೂಪ" ಎಂಬ ಲೇಖನದಲ್ಲಿ ಸಾಹಿತ್ಯ ಬೆಳೆದು ಬಂದ ರೀತಿ, ಆಗಿರುವ ಬದಲಾವಣೆಗಳು, ಅದಕ್ಕೆ ಕಾರಣಗಳು, ಅದರಿಂದ ಸಾಹಿತ್ಯ ಮತ್ತು ಕಲೆಗೆ ಆಗಿರುವ ಪ್ರಯೋಜನ ಅದರಲ್ಲಿ ದಾಖಲಿಸಬೇಕೆಂದು ಹೇಳುತ್ತಾರೆ. ಇದಕ್ಕಾಗಿ ಸಾಹಿತ್ಯ ಚರಿತ್ರೆಕಾರರು, ಕವಿಗಳ ಕಾಲ ಅವರ ಜೀವನ, ಗ್ರಂಥಗಳು ಮತ್ತು ಅದು ರಚಿತವಾದ ಸಂದರ್ಭ ಮುಂತಾದ ಪರಿಜ್ಞಾನ ಹೊಂದಿರಬೇಕೆಂದೂ ಹೇಳುತ್ತಾರೆ. ಇದು ಎಷ್ಟೆಷ್ಟು ಸಮರ್ಪಕವಾಗಿರುತ್ತದೆಯೋ ಅಷ್ಟಷ್ಟು ಸಾಹಿತ್ಯ ಚರಿತ್ರೆ ವೈಜ್ಞಾನಿಕವಾಗಿರುತ್ತದೆ ಎಂದು ಹೇಳಿದ್ದಾರೆ.

**ರಾಬರ್ಟ್ ಸ್ಪಿಲ್ಲರ್:** ಎಂಬ ಸಾಹಿತಿ, ಸಾಹಿತಿಯ ಜೀವನ ಚರಿತೆ ತಿಳಿಯುವುದು ಅವಶ್ಯಕವಾದದ್ದು ಎನ್ನುತ್ತಾನೆ. ಅಲ್ಲದೆ ಅದು ಒಬ್ಬ ಲೇಖಕನ ಅಥವಾ ಒಂದು ಕಾಲದ ಜೀವನಾನುಭವಸಾರ ಈ ಅನುಭವ ಅವನ ಕ್ರಿಯಾ ಶೀಲತೆಯ ಮತ್ತು ಲಕ್ಷಣಗಳ ಧ್ಯೋತಕ. ಇದು ಸಾಹಿತ್ಯ ಚರಿತ್ರೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಬದಲಾಗುತ್ತದೆ. ಈ ಬದಲಾವಣೆಯ ಹಿನ್ನಲೆಯಲ್ಲಿ ಒಂದು ಜನತೆಯ ಜೀವನದ ನಾನಾ ಘಟ್ಟಗಳನ್ನು ಗುರುತಿಸಬಹುದು ಇದನ್ನು ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಬೇಕು.
ಇಂತಹ ಸಮಯದಲ್ಲಿ ಶುದ್ಧ ಸಾಹಿತ್ಯದ ಜೊತೆಗೆ ಶಾಸ್ತ್ರ ಸಾಹಿತ್ಯವನ್ನು ಗಮನಿಸುವುದು ಅವಶ್ಯಕ. ಸಾಹಿತ್ಯ ಚರಿತ್ರೆಯನ್ನು ಓದುವುದರಿಂದ ಜನಗಳಲ್ಲಿ ಸಾಹಿತ್ಯಾಭಿರುಚಿಯೂ ಬೆಳೆಯುತ್ತದೆ. ಇದರ ಅಭ್ಯಾಸ ನಮ್ಮ ಸಂಸ್ಕೃತಿಯ ಅಭ್ಯಾಸ ನಮ್ಮ ಸಾಂಸ್ಕೃತಿಕ ನೈತಿಕ ಗುಣಗಳನ್ನು ಅರಿಯಬೇಕಾದರೆ ನಾವು ನಮ್ಮ ಸಾಹಿತ್ಯಕ್ಕೆ ಶರಣು ಹೋಗಬೇಕು ಆದ್ದರಿಂದ ಆಯಾ ಭಾಷೆಯಾ ಸಾಹಿತ್ಯ ಚರಿತ್ರೆಯನ್ನು ಮುಂದಿನ ಪೀಳಿಗೆಯನ್ನು ಅರಿಯುವುದು ಅನಿವಾರ್ಯ ಹಾಗೂ ಅವಶ್ಯಕ ಎಂದು ಹೇಳಬಹುದು. ಹಾಗೆಯೇ ಒಂದು ಭಾಷೆಯ ಸಾಹಿತ್ಯವನ್ನು ವಿವೇಚನೆ ಮತ್ತು ಅಧ್ಯಯನದ ಅನುಕೂಲಕ್ಕಾಗಿ ಅದನ್ನು ಕೆಳಕಂಡಂತೆ ವಿಭಾಗ ಮಾಡಿಕೊಂಡು ಸರಳೀಕರಿಸಿಕೊಳ್ಳುತ್ತೇವೆ. ಕನ್ನಡ ಸಾಹಿತ್ಯವನ್ನು ಮೊಟ್ಟಮೊದಲು "ಆರ್. ನರಸಿಂಹಚಾರ್ಯ" ಅವರು "ಕವಿಚರಿತ್ರೆ" ಗ್ರಂಥದಲ್ಲಿ ಕನ್ನಡ ಕವಿಗಳನ್ನು ಸ್ಥೂಲವಾಗಿ –ಜೈನ, ವೀರಶೈವ ಮತ್ತು ವೈಷ್ಣವ ಎಂದು ವಿಭಾಗಿಸಿದ್ದಾರೆ, ಕನ್ನಡ ಭಾಷೆ ಸಾಹಿತ್ಯವನ್ನು ಸಂಪದ್ಭರಿತವನ್ನಾಗಿ

ಮಾಡಿದ್ದಾರೆ. ಆದರೆ ಒಂದು ದೃಷ್ಟಿಯಿಂದ ಈ ವಿಭಾಗ ಕ್ರಮವು ಮತ ಭೇದಗಳನ್ನು ಹೊತ್ತು ತರುತ್ತದೆ. ಎಂಬ ಕಾರಣದಿಂದ ಇದನ್ನು ಕೆಲವರು ನಿರ್ಲಕ್ಷಿಸಿದರು. ಮುಂದೆ ಭಾಷಾ ದೃಷ್ಟಿಯನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯ ಚರಿತ್ರೆಯನ್ನು ಮುಖ್ಯವಾಗಿ "ಐದು" ರೀತಿಯಾಗಿ ವಿಂಗಡಿಸಿದವರು "ಎಂ.ಎ. ದೊರೆಸ್ವಾಮಿ ಐಯ್ಯಂಗಾರ್" ಅವರು. ಅವು ಈ ಕೆಳಗಿನಂತಿವೆ.

೧. ಪೂರ್ವದ ಹಳಗನ್ನಡ ಕಾಲ – ಕ್ರಿ.ಶ. ೭೫೦ ರ ವರೆಗೆ

೨. ಹಳಗನ್ನಡ ಕಾಲ – ಕ್ರಿ.ಶ. ೭೫೦ – ಕ್ರಿ.ಶ. ೧೧೫೦

೩. ಮಧ್ಯಗನ್ನಡ ಕಾಲ – ಕ್ರಿ.ಶ. ೧೧೫೦ – ಕ್ರಿ.ಶ. ೧೫೦೦

೪. ಹೊಸಗನ್ನಡ ಕಾಲ – ಕ್ರಿ.ಶ. ೧೫೦೦ – ಕ್ರಿ.ಶ ೧೮೫೦

೫. ನವಗನ್ನಡ ಕಾಲ – ಕ್ರಿ.ಶ. ೧೮೫೦ – ಕ್ರಿ.ಶ. ಇತ್ತೀಚಿನ ವರೆಗೆ.

ಮುಖ್ಯವಾಗಿ ನಾವೀಗ ಆರಿಸಿಕೊಂಡಿರುವ ವಿಷಯವನ್ನು ಗಮನಿಸುವುದಾದರೆ. "ಹೊಸಗನ್ನಡ ಸಾಹಿತ್ಯ" ಘಟ್ಟವನ್ನು ಅಭ್ಯಸಿಸಬೇಕು. ೧೯ನೇ ಶತಮಾನ ದೇಶದ ಚರಿತ್ರೆಯಲ್ಲಿ ಒಂದು ಪರ್ವಕಾಲ ನಮ್ಮ ಸ್ವಾತಂತ್ರ್ಯ ಈ ಅವಧಿಯಲ್ಲಿ ಪೂರ್ವ ಹರಣವಾದದ್ದು ಮತ್ತು ಅದನ್ನು ಮತ್ತೆ ಪಡೆಯಬೇಕೆಂಬ ಫಲ ಮೂಡಿದ್ದು ಇದೇ ಶತಮಾನದಲ್ಲಿ. ಬದುಕನ್ನು ತುಂಬಿದ ಅನೇಕ ನಂಬಿಕೆ, ನಡವಳಿಕೆಗಳನ್ನು ಪ್ರಶ್ನಿಸುವ ಧೈರ್ಯ ಉಂಟಾಯಿತು. ಹಳತು–ಹೊಸತರ ಘರ್ಷಣೆಯಿಂದ ಹೊಸದಾದ ಜೀವನ ಅನುಸಾರಗೊಂಡು ಉದಯವಾಗತೊಡಗಿತು. ಪುನರ್ ಮೌಲ್ಯಗಳು ಬೆಳಕಿಗೆ ಬರತೊಡಗಿದವು ಇದೆಲ್ಲದರ ಪರಿಣಾಮ ಭಾರತೀಯ ಸಾಹಿತ್ಯ ಚಟುವಟಿಗಳು ಹಿಂದಿಗಿಂತ ಬಹಳ ಪ್ರಭಾವಕ್ಕೊಳಗಾದವು. ಭಾರತದ ಸಾಹಿತ್ಯದಲ್ಲಿ ಅರುಣೋದಯ ಉಂಟಾಯಿತು ಈ ಶತಮಾನವನನು "ಡಾ॥ ಶ್ರೀನಿವಾಸ ಹಾವನೂರು" ಅವರು "ಹೊಸಗನ್ನಡದ ಅರುಣೋದಯ"ದ ಕಾಲವೆಂದು ಕರೆದಿದ್ದಾರೆ. ಮುಂದೆ ಸಾಹಿತ್ಯ ಸಾಗುವಳಿ ಮುಂದುವರೆಯ ತೊಡಗಿತು ಹೊಸಗನ್ನಡ ಸಾಹಿತ್ಯದಲ್ಲೂ ಕೆಲವು ಪ್ರಕಾರಗಳು ಗರಿಕೆದರ ತೊಡಗಿದವು ಅವುಗಳನ್ನು ಮುಂದೆ ಗುರುತಿಸಲಾಗಿದೆ.

**ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳು**

ಕನ್ನಡ ಕಾವ್ಯವು ಧೀರ್ಘ ಪರಂಪರೆಯನ್ನು ಹೊಂದಿರುವಂತೆ ಬಹಳ ಅರ್ಥಗರ್ಭಿತವಾದ ಚೌಕಟ್ಟನ್ನು, ಎಲ್ಲೆಗಳನ್ನು ಒಳಗೊಂಡಿದೆ ಕಾವ್ಯದ ಜನನ ಸದಾ ಪ್ರಯೋಗ ಶೀಲವಾದುದು ಹೀಗಾಗಿ ಕಾವ್ಯ ಪ್ರಕ್ರಿಯೆ ಯಾವಾಗಲೂ ಹೊಸತನಕ್ಕಾಗಿ ತಳಮಳಿಸುತ್ತಿರುತ್ತದೆ. ಹೊಸಗನ್ನಡ ಸಾಹಿತ್ಯವನ್ನು ವಿಂಗಡಿಸುವುದು ಅಭ್ಯಾಸದ ಅನುಕ್ಕೂಲಕ್ಕಾಗಿಯೇ ಹೊರತು ಇದು ಹೀಗೆ ಎಂದು ಗೆರೆ ಎಳೆಯುವುದಕ್ಕಲ್ಲ

ಹೊಸಗನ್ನಡ ಕಾವ್ಯವನ್ನು ಅಧ್ಯಯನ ದೃಷ್ಟಿಯಿಂದ ಈ ರೀತಿ ವಿಭಜಿಸಿ ಕೊಳ್ಳಬಹುದು/

೧. ೧೮೭೦ – ೧೯೨೦ = ನವೋದಯ ಪೂರ್ವ

೨. ೧೯೨೦ – ೧೯೪೫ = ನವೋದಯ

೩. ೧೯೪೫ – ೧೯೫೦ = ಪ್ರಗತಿಶೀಲ

೪. ೧೯೫೦ – ೧೯೭೫ = ನವ್ಯ

೫. ೧೯೭೯ – ಈಚೆಗೆ= ದಲಿತ ಮತ್ತು ಬಂಡಾಯ

**ನವೋದಯ ಸಾಹಿತ್ಯ ಮತ್ತು ಅದರೊಟ್ಟಿಗಿನ ಪ್ರಕೃತಿಯ ವರ್ಣನೆ: ನವೋದಯ**

ಹತ್ತನೆಯ ಶತಮಾನದಲ್ಲಿ ಹಳಗನ್ನಡ ಸಾಹಿತ್ಯದ ಸುವರ್ಣಯುಗ ಪ್ರಾರಂಭವಾದರೆ, ಇಪ್ಪತ್ತನೆಯ ಶತಮಾನದಲ್ಲಿ ಹೊಸಗನ್ನಡ ಸಾಹಿತ್ಯದ ಸುವರ್ಣಯುಗ ಪ್ರಾರಂಭವಾಗಿದೆ. ಅದಕ್ಕೆ ಸಾಹಿತಿಗಳು ಮತ್ತು ಸಾಹಿತ್ಯಾಭಿಮಾನಿಗಳು ಈ ಕಾಲವನ್ನು ಸುಗ್ಗಿಯ ಕಾಲವೆಂದು ಗುರುತಿಸಿದ್ದಾರೆ. ೧೯೨೦ ರಿಂದ ಪ್ರಾರಂಭವಾದ ಈ ಕಾಲದ ಆರಂಭ ಬಿ.ಎಂ.ಶ್ರೀಯವರ "ಇಂಗ್ಲೀಷ್ ಗೀತೆಗಳು" ಎಂಬ ಸಂಕಲನದಿಂದ ಆಯಿತು. ಪಂಪ ಕವಿಮಾರ್ಗವನ್ನು ಶೋಧಿಸಿದರೆ ಬಿ.ಎಂ.ಶ್ರೀಯವರು ಕವಿಮಾರ್ಗವನ್ನು ತೋರಿಸಿಕೊಟ್ಟರು. ಈ ಕಾರಣದಿಂದ ಬಿ.ಎಂ.ಶ್ರೀಯವರನ್ನು "ಕವಿಗಳ ಕವಿ" ಎಂದು ಕರೆಯಲ್ಪಟ್ಟರು. ನವೋದಯ ಕಾವ್ಯ ಯುರೋಪಿನ ರೋಮ್ಯಾಂಟಿಕ್ ಕಾವ್ಯದಿಂದ ಪ್ರೇರಣೆ ಪಡೆದಿದ್ದರೂ "ಅದು ತನ್ನ ಕಾಲುಚಾಚಿ ಬೆಳೆದದ್ದು ಭಾರತೀಯ ಸಂಸ್ಕೃತಿಯ ತೋಟ ಗದ್ದೆಗಳಲ್ಲಿ" ಎಂಬುದನ್ನು ಮರೆಯುವಂತಿಲ್ಲ.

ಶ್ರೀಯವರೇ ಹೇಳುವಂತೆ " ಇವಳ ಸೊಬಗನವಳು ತೊಟ್ಟು ನೋಡ ಬಯಸಿದೆ, ಅವಳ ತೊಡುಗೆ ಇವಳಿಗಿಟ್ಟು ಹಾಡಬಯಸಿದೆ" ಕನ್ನಡ ನವೋದಯ ಕಾವ್ಯಕ್ಕೆ ಇಂಗ್ಲೆಂಡಿನ ರೋಮ್ಯಾಂಟಿಸಂ, ಕನ್ನಡ ಜನಪದ ಕಾವ್ಯ, ಅನುಭಾವ ಕಾವ್ಯ, ವಚನ, ಕೀರ್ತನೆಗಳು ರಂಗಗೀತೆಗಳು ಪ್ರೇರಣೆ ನೀಡಿರುವುದನ್ನು ಕಾಣಬಹುದು. ಪಾಶ್ಚಾತ್ಯ ಕವಿಗಳಾದ ಏಟ್ಸ್, ಏಡನ್, ಎಲಿಯಟ್, ಪೌಚಿಡ್ ಈ ಕವಿಗಳ ಪ್ರೇರಣೆಗಳ ಜೊತೆಗೆ ಷರಿಫ್ ಸಾಹೇಬ್, ಕಡಕೋಳ ಮಡಿವಾಳಪ್ಪರಂತಹ ಅನುಭಾವ ಕವಿಗಳ ಪ್ರಭಾವವೂ ಆಗಿದೆ.

ಪಾಶ್ಚಾತ್ಯ ಕಾವ್ಯ ರೂಪಗಳಾದ ಸಾನೆಟ್, ಬ್ಲ್ಯಾಂಕವರ್ಸ್, ಲಿರಿಕ್, ಎಲಿಜಿ, ಫ್ರೀವರ್ಸ್‌ಗಳ ಜೊತೆಗೆ ಷಟ್ಪದಿ, ಕಂದ, ಚೌಪದಿ, ರಗಳೆಯಂತಹ ದೇಸಿ ರೂಪಗಳು, ತ್ರಿಪದಿ, ಲಾವಣೆ, ಗೀಗಿಪದ, ಪಾರಿಜಾತಕ ಹಾಡು, ಹಪ್ಪಿನ ಹಾಡಿನಂತಹ ಜನಪದ ರೂಪಗಳು ನವೋದಯ ಕಾವ್ಯದ ಹೊಸ ರೂಪಗಳನ್ನು ಸಿದ್ಧಗೊಳಿಸಿಕೊಳ್ಳುವಲ್ಲಿ ಸಹಾಯವಾಗಿದೆ.

ಇಲ್ಲಿ ಪ್ರಕೃತಿ ಮತ್ತು ಮಾನವನ ಸಂಬಂಧದ ಗಾಢತೆಯನ್ನು ವಿಶ್ಲೇಷಿಸಲಾಗಿದೆ. ೧೯೨೦ ರಿಂದ ಗಾಂಧಿಯುಗ ಪ್ರಾರಂಭವಾಯಿತು. ಭಾರತ ಸ್ವಾತಂತ್ರ್ಯ ಚಳುವಳಿ ನವೋದಯ ಕಾವ್ಯಕ್ಕೆ ಮುಖ್ಯ ವಸ್ತುವಾಯಿತು. ದೇಶಭಕ್ತಿ "ಪ್ರಕೃತಿ ವರ್ಣನೆ" ಆತ್ಮೋದ್ಧಾರ ನೀತಿ ಆಧ್ಯಾತ್ಮ, ಪ್ರೀತಿ ಪ್ರೇಮ, ನಾಡು–ನುಡಿ, ಅಭಿಮಾನ ಸಾಮಾಜಿಕ ಚಿಂತನೆ ಇವೆಲ್ಲ ನವೋದಯ ಕಾವ್ಯಕ್ಕೆ ಮೂಲ ನೆಲೆಗಳಾದವು.

ನವೋದಯ ಕವಿಗಳು ಏನಿದ್ದರೂ ಅವರು "ಬಾಳನ್ನು ಅರ್ಥ ಪೂರ್ಣವೆಂದು ನಂಬಿದವರು" ಹೀಗೆ ನವೋದಯ ಸಾಹಿತ್ಯ ಇಹ–ಪರ, ನನಸು–ಕನಸು, ವಾಸ್ತವ ಕಲ್ಪನೆಗಳ ನಡುವೆ ಸಾಧಿಸಿದ ಸಮನ್ವಯ ತೀರ ಮುಖ್ಯವಾದುದಾಗಿದೆ.

**ನವೋದಯದ ಕವಿಗಳು**

ಬಿ.ಎಂ.ಶ್ರೀ, ಡಿ.ವಿ.ಜಿ, ಮಾಸ್ತಿ ವೆಂಕಟೇಶ್ ಐಯ್ಯಂಗಾರ್, ಕುವೆಂಪು, ಪು.ತಿ.ನ, ರಾಜರತ್ನಂ. ಎಸ್.ವಿ.ರಂಗಣ್ಣ, ನರಸಿಂಹಸ್ವಾಮಿ, ಶಿವರುದ್ರಪ್ಪ, ಗೋವಿಂದ ಪೈ, ಎಂ.ಎನ್. ಕಾಮತ್, ಕಡೆಂಗೋಡ್ಲು ಶಂಕರಭಟ್ಟ, ದಿನಕರ ದೇಸಾಯಿ, ಬೇಂದ್ರೆ, ಮಧುರ ಚೆನ್ನ, ಡಿ.ಎಸ್.ಕರ್ಕಿ, ರಸಿಕ ರಂಗ, ವಿನಾಯಕ, ಆನಂದ ಕಂದ, ಸಾಲಿರಾಮಚಂದ್ರ ಈಶ್ವರ ಸಣಕಲ, ಚನ್ನವೀರ ಕಣವಿ, ಜೋಳದರಾಶಿ ದೊಡ್ಡನಗೌಡ, ವೈ ನಾಗೇಶ ಶಾಸ್ತ್ರಿ, ಪಂಡಿತ ತಾರಾನಾಥ, ವ್ಯಾಕರಣದ ಚಂದ್ರಶೇಖರ್ ಶಾಸ್ತ್ರಿ, ಗೊರೆಬಾಳ ಹಣಮಂತರಾಯ, ಸಿದ್ಧಯ್ಯ ಪುರಾಣಿಕ, ಶಾಂತರಸ, ಮ.ಗು. ಬಿರಾದಾರ ಮುಂತಾದವರು.

ಭಾರತೀಯರ ಸಹಜ ಆತ್ಮಗೌರವ, ಆಶಾವಾದಿ, ಆದರ್ಶಗಳು, ಜಾತ್ಯಾತೀತ, ಪ್ರಜಾಪ್ರಭುತ್ವದ ಮೌಲ್ಯಗಳು, ವಿಶ್ವ ಧರ್ಮ, ವಿಶ್ವ ಭ್ರಾತೃತ್ವ "ಆಧ್ಯಾತ್ಮ ಅನುಭಾವಗಳು ಇವೆಲ್ಲ ಸಮ್ಮಿಲನವಾದ ಯುಗ ಮನೋಧರ್ಮವನ್ನು ನವೋದಯ ಪ್ರತಿಬಿಂಬಿಸಿತು. ಅದು

'ಮನ್ಯಷ್ಯನನ್ನು ನಿಸರ್ಗವನ್ನೊಳಗೊಂಡ ಸೃಷ್ಠಿಯಲ್ಲಿಟ್ಟು ನೋಡಿತು.

**ನವೋದಯ ಸಾಹಿತ್ಯದಲ್ಲಿ ಪ್ರಕೃತಿಯ ವರ್ಣನೆ**

ಈ ಹಿಂದೆಯೇ ತಿಳಿಸಿರುವಂತೆ ಹೊಸಗನ್ನಡ ಸಾಹಿತ್ಯದ ಕಾಲಘಟ್ಟಗಳಲ್ಲಿ ಪ್ರಮುಖವೆನಿಸಿರುವ ನವೋದಯ ಸಾಹಿತ್ಯವು ೧೯೨೦ ರಲ್ಲಿಯೇ ಪ್ರಾರಂಭವಾಯಿತು. ಇದನ್ನು ಹೊಸಗನ್ನಡ ಸಾಹಿತ್ಯದ ಸುವರ್ಣಯುಗವೆಂಸದು ಕರೆದಿದ್ದು ಇದಕ್ಕೆ (ಸಮವೆಂಬಂತೆ) ಅನುಗುಣವೆಂಬಂತೆ, ಪ್ರೋ. ಬಿ.ಎಂ.ಶ್ರೀಕಂಠಯ್ಯರವರು "ಐಜಚಿಜ ಇುಟಿಜಟಥಿ ಟುರ್ಙಣ" ಎಂಬ ಕವಿತೆಯನ್ನು ಕನ್ನಡಕ್ಕೆ ಅನುವಾದ ಮಾಡಿದ "ಕರುಣಾಳು ಬಾ ಬೆಳಕೆ" ಎಂಬ ಕವನ ತುಂಬಾ ಪ್ರಮುಖವಾಯಿತು. ಕವನದ ಮೇಲ್ನೋಟವು ಒಂದು ಆಧ್ಯಾತ್ಮಕ ರೀತಿಯಲ್ಲಿ ಪ್ರಕೃತಿಯಲ್ಲಿ ಅಡಗಿರುವ ದೈವವನ್ನು ಆರಾಧಿಸುವಂತಿದೆ.

"ಕರುಣಾಳು ಬಾ ಬೆಳಕೆ; ಮುಸುಕದೀ ಮಬ್ಬಿನಲಿ,
ಕೈ ಹಿಡಿದು ನಡೆಸೆನ್ನನು.
ಇರುಳು ಕತ್ತಲೆಯ ಗವಿ; ಮನೆದೂರ; ಕನಿಕರಿಸಿ;
ಕೈಹಿಡಿದು ನಡೆಸೆನ್ನನು."
ಹೀಗೆ ಕವಿಯು ಈ ಕವಿತೆಯನ್ನು ರೂಪಿಸಿದ್ದಾರೆ.

"ಕರುಣೆಯುಳ್ಳ ಸೂರ್ಯನೂ ಸಹ ಪ್ರಕೃತಿಯ ಮೂಲ. ಸೂರ್ಯನಿಲ್ಲದಿದ್ದರೆ ಜಗತ್ತು ಕತ್ತಲೆಯಲ್ಲಿ ಮುಳುಗುವುದು; ಇಲ್ಲಿ ಜತ್ತಲೇ ಹುಟ್ಟುತ್ತಿರಲಿಲ್ಲ" ಎಲ್ಲೆಡೆಯೂ ಕತ್ತಲೂ ತುಂಬಿರುತ್ತಿತ್ತು. ಆದರೆ ಇಲ್ಲಿ ಕವಿಯೂ ಸೂರ್ಯನೇ ಜಗತ್ತಿನ ಜೀವಾಳವೆಂದು ಪ್ರಕೃತಿಯನ್ನು ಮರೆಯದೆ ಪ್ರಕೃತಿಯನ್ನು ತನ್ನ ಕವಿತೆಯಲ್ಲಿ ಮೆರೆಸಿದ್ದಾರೆ.

ಹೀಗೆ ಮುಂದುವರೆದು ನಾವು ಅನೇಕ ಪ್ರಕೃತಿ ಕವಿತೆಗಳನ್ನು ಕಾಣಬಹುದು ಅವುಗಳು ಇಂತಿವೆ. ಕುವೆಂಪುರವರು ಬರೆದಿರುವ ಪಾಂಚಜನ್ಯ, ನವಿಲು, ಕಲಾಸುಂದರಿ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪ್ರೇಮ ಕಾಶ್ಮೀರ, ಪಕ್ಷಿಕಾಶಿ ಮುಂತಾದವುಗಳು ಪೂರ್ಣ ಪ್ರಕೃತಿ ಕವಿತೆಗಳಾಗದಿದ್ದರೂ ಇನ್ನೂ ಕೆಲವಾರು ಪ್ರಕೃತಿ ಕವಿತೆಗಳೇ ಹೆಚ್ಚಾಗಿವೆ.

ಹೀಗೆ ಮುಂದೆ ಬೇಂದ್ರೆಯವರು ಬರೆದಿರುವ
"ಬಂತಿದೋ ಶೃಂಗಾರ ಮಾಸ"

ಬೇಂದ್ರೆಯವರು ಬರೆದ ಪ್ರಣಯ ಗೀತೆ "ದೀಪ" ಬೇಂದ್ರೆಯವರ ಪ್ರಣಯ ಗೀತೆಗಳಲ್ಲಿ ಕಾಣುವುದು ವೈಯಕ್ತಿಕ ಕಾಮನೆಯಲ್ಲಿ ಅದು ಇಡೀ ಪ್ರಕೃತಿಯಲ್ಲಿ ಅಂದೆ ಸೂರ್ಯ, ಚಂದ್ರ, ನಕ್ಷತ್ರ, ಬಾನು, ಭೂಮಿ ಇವುಗಳನ್ನು ಒಳಗೊಂಡ ಬ್ರಹ್ಮಾಂಡ ಮಟ್ಟದಲ್ಲಿ ಕಂಡುಬರುವ ಪ್ರಣಯ ಭಾವದ ರೂಪಕ ಚಿತ್ರವಾಗಿದೆ.

ಉತ್ತರ ಭಾರತದ ಅನೇಕ ಪುಣ್ಯ ಕ್ಷೇತ್ರಗಳಲ್ಲಿ ನದಿಗೆ ಆರತಿ ಎತ್ತುವುದ, ನದಿಗಳಲ್ಲಿ ಚಿಕ್ಕ ಚಿಕ್ಕ ದೀಪಗಳನ್ನು ತೇಲಿ ಬಿಡುವುದು, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನಡೆದು ಬಂದ ಪದ್ಧತಿ ಸಪತ್ನಿಕರಾಗಿ ಪ್ರಯೋಗಕ್ಕೆ ಬಂದ ಬೇಂದ್ರೆಯವರು ಒಂದು ಮುಂಜಾನೆ ಅಂದರೆ ಸೂರ್ಯೋದಯಕ್ಕೂ ಮೊದಲು ರಾತ್ರಿಯ ನಾಲ್ಕನೇ ಪ್ರಹರದಲ್ಲಿ ಗಂಗಾ, ಯಮುನಾ ನದಿಗಳ ಸಂಗಮದಲ್ಲಿ ದೀಪಗಳನ್ನು ತೇಲಿಬಿಡುವ ಧಾರ್ಮಿಕ ಪ್ರಜ್ಞೆಯಲ್ಲಿ ಪಾಲ್ಗೊಂಡರು.

ಚೈತ್ರ ಶುದ್ಧ ಹುಣ್ಣಿಮೆಯ ದಿನವಾದ್ದರಿಂದ ಮುಳುಗುತ್ತಿರುವ ಚಂದ್ರನೂ ಪೂರ್ಣ ಪ್ರಮಾಣದಲ್ಲಿ ಬೆಳದಿಂಗಳನ್ನು ಚೆಲ್ಲುತ್ತಿದ್ದಾನೆ. ತ್ರಿವೇಣಿ ಸಂಗಮದ ಆ ಪರಿಸರದಲ್ಲಿ ಬೇಂದ್ರೆಯವರ ಕವಿ ಮನಸ್ಸು ಇಂಥದೊಂದು ಸುಂದರ ಗೀತೆಯನ್ನು ಹಾಡಿದೆ.

ನೀನು ಮುಗಿಲು ನಾನು ನೆಲ

ಗಂಡು ಹೆಣ್ಣಿನ ಪ್ರೇಮ ಸಂಬಂಧವನ್ನು ಕವಿಗಳು ಪ್ರಕೃತಿಯಲ್ಲಿರುವ ಹಲವು ವಸ್ತು–ವಿಷಯಗಳಿಗೆ ಹೋಲಿಸಿ ಬಗೆಬಗೆಯಲ್ಲಿ ಕವಿತೆ ಕಟ್ಟಿ ಹಾಡಿದ್ದಾರೆ. ಆ ಸಂಬಂಧ ನದಿ ಮತ್ತು ಕಡಲಿನ ಸಂಬಂಧದಂತಿದೆ. ಹೂ ದುಂಬಿಯ ಪ್ರೇಮ ಸಂಬಂಧದಂತಿದೆ, ತರು–ಲತೆಗಳ ಅವಲಂಬನೆಯಂತಿದೆ. ನೆಲ ಮುಗಿಲಿನ ಆಕರ್ಷಣೆಯಂತೆಯೂ ಇದೆ.

ಕವಿ "ಜಿ. ಎಸ್. ಶಿವರುದ್ರಪ್ಪ" ನೆಲ ಮುಗಿಲು ನಡುವೆ ಇಂಥ ಪ್ರಣಯಭಿಮಾನವನ್ನು ಕಂಡು ನೀನು ಮುಗಿಲು ನಾನು ನೆಲ ನಿನ್ನ ಒಲುಮೆ ನನ್ನ ಬಲ ಎಂದು ಹಾಡಿದ್ದಾರೆ. ವಾಸ್ತವದಲ್ಲಿ ಇಡೀ ಬ್ರಾಹ್ಮಾಂಡವೇ ಪ್ರಕೃತಿ ಮತ್ತು ಪುರುಷ ಎಂಬ ಎರಡು ನೆಲೆಗಳಲ್ಲಿ ನಿಂತು ಕ್ರಿಯಾಶೀಲಗೊಳ್ಳುತ್ತಾ ಸಾಗುತ್ತದೆ. ಸಾಮಾನ್ಯ ಜೀವೋತ್ಪತ್ತಿಯ ಸಂಬಂಧದಿಂದ ಹಿಡಿದು ಸೃಷ್ಠಿಯ ಎಲ್ಲಾ ಸಮತೋಲನಗಳನ್ನು ಆಕರ್ಷಣೆ ವಿಕರ್ಷಣೆಗಳ ಮೂಲಕವೇ ಸಾಧಿಸಿದಂತಿದೆ.

ಈ ಕವಿತೆಯಲ್ಲಿ ಕವಿ ಪ್ರಕೃತಿಯ ಸ್ಥಾನದಲ್ಲಿ ನಿಂತು ಪುರುಷನನ್ನು ಕರೆಯುತ್ತಾ ಹಾಡುತ್ತಾರೆ. ನೀನು ಮುಗಿಲು ನಾನು ನೆಲ, ನಿನ್ನ ಒಲವೆ ನನ್ನ ಬಲ ಅಂದರೆ ಮುಗಿಲ ದೀಪಗಳಾದ ಸೂರ್ಯ ಚಂದ್ರರು ನಕ್ಷತ್ರಗಳು ತೋರಿದ ಒಲವೇ ಈ ಭೂಮಿಯ ಬಲದಂತಿದೆ ಎಂದು ಪ್ರಕೃತಿಯನ್ನು ವರ್ಣಿಸಿದ್ದಾರೆ. ಕನ್ನಡ ಮತ್ತೊಬ್ಬ ಪ್ರಮುಖ ಭಾವಗೀತಕಾರರು ವಿ. ಸೀತಾರಾಮಯ್ಯನವರು ಬಹುಮುಖ ಪ್ರತಿಭೆಯ ಈ ಕವಿ ಭಾವಗೀತಕಾರನ ಕರ್ತವ್ಯವೇನು ಎಂಬುದನ್ನು ಸೂಚಿಸಿದರು. ಕವಿಯು ಪ್ರಪಂಚವನ್ನು ಕಣ್ಣು ತುಂಬ ನೋಡಲಿ ತನ್ನ ಆದೇಶಗಳು ಒಂದು ಹದಕ್ಕೂ ಪಾಕಕ್ಕೂ ಬರುವಂತೆ ಮನಸ್ಸನ್ನು ನಿರಂತರವಾಗಿ ಒಂದು ಶಾಖದಲ್ಲಿಟ್ಟು ಕೊಳ್ಳಲಿ; ತನ್ನ ವ್ಯಕ್ತಿತ್ವದ ಮುದ್ರೆಯನ್ನು ಕವಿತೆಯ ಮೇಲೆ ಹಾಕಲಿ; ಪ್ರಪಂಚಕ್ಕೆ ಒಂದು ಹೊಸ ಸೃಷ್ಠಿಯನ್ನು ಸಾತ್ವಿಕದಿಂದ ಮಿಡಿಯುವ ಒಂದು ಮೃದು ಜೀವನವನ್ನು ಕಾಣಿಕೆಯಾಗಿ ಅರ್ಪಿಸಲಿ ಆದ್ದರಿಂದ ಪ್ರಪಂಚದ ಸತ್ವವು ಬೆಳೆಯುವಂತಾಗಲಿ; ಗೀತೆಗಳು; ದೀಪಗಳು, ನೆರಳು–ಬೆಳಕು, ದ್ರಾಕ್ಷಿ ದಾಳಿಂಬೆ, ಹೆಜ್ಜೆ ಪಾಡು, ಅರಲು ಬರಲು– ಇವು ವಿ.ಸೀತಾರಾಮಯ್ಯನವರ ಕವನ ಸಂಕಲನಗಳು.

ನಂತರದಲ್ಲಿ ಅಭಿವ್ಯಕ್ತಿ ಉಪಮೇಗಳ ನೂತನತೆ, ಶೈಲಿಯ ಮಾರ್ದವತೆ ಈ ಎಲ್ಲ ಲಕ್ಷಣಗಳು ಇವರ ಅನೇಕ ಕವನಗಳಲ್ಲಿ ಎದ್ದು ಕಾಣುತ್ತವೆ. ಮಣ್ಣಿನಂತೆ ಕಾಣುವ ಜೀವನದ ಬಂಗಾರವನ್ನು ಅನನ್ಯವಾಗಿಟ್ಟ ರೀತಿಯಲ್ಲಿ ತೆರೆದು ತೋರಿಸುವ ಈ ಕವಿ ಜನರ ಮನಸ್ಸಿಗೆ ತೀರಾ ಹತ್ತಿರ. ನವೋದಯ ಭಾವ ಗೀತಕರಾಗಿ (ಸಾಹಿತಿಗಳಾಗಿ) ಪ್ರಾರಂಭವಾಗಿ ನವ್ಯ ಪಂಥದ ಕವಿಗಳಾಗಿ ಪರ್ಯವಸಾನಗೊಂಡ ಎಂ.ಗೋಪಾಲಕೃಷ್ಣ ಅಡಿಗರು ಭಾವತರಂಗ ಮತ್ತು ಕಟ್ಟುವೆವು ನಾವು ಕವನ ಸಂಕಲನಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಕೆಲವು ಮಹತ್ವದ ಕವಿತೆಗಳನ್ನು ನಿಡಿದ್ದಾರೆ " ಮೋಹನ ಮುರಲಿ" ಒಂದು ಸುಂದರ ಶಕ್ತಿ ಪೂರ್ಣ ಕಲಾ ಸೃಷ್ಠಿ ಪ್ರಾಸ, ಅನುಪ್ರಾಸಗಳು ಮರುಕಳಿಸಿ, ರಹಸ್ಯ ಪೂರ್ಣವಾದ, ಆದರೆ ನಮ್ಮ ಅಂತರಂಗ ಜಗತ್ತಿನಲ್ಲಿ ಅಸ್ತಿತ್ವದಲ್ಲಿದೆ ಎನ್ನುವ ವಾಸ್ತವ ಭಾವನೆಗಳನ್ನು ಮೂರ್ತ ರೂಪದಲ್ಲಿ ನೀಡುವ ಶಕ್ತಿ ಆಡಿಗರಿಗೆ ಸಿಕ್ಕಿದೆ.

ಹೂವು ಹಾಸಿಗೆ ಚಂದ್ರ ಚಂದನ ಬಾಹು ಬಂಧನ ಚುಂಬನ ಬಯಕೆ ತೋಟದ ಬೇಲಿಯೊಳಗೆ ಕರಣ ಗಣದೀ ರಿಂಗಣ ಒಲಿದ ಮಿದುವೆದೆ ರಕ್ತ ಮಾಂಸದ ಬಿಸಿದು ಸೋಂಕಿನ ಪಂಜರ; ಇಷ್ಟೇ ಸಾಕೆಂದಿದ್ದೆಯಲ್ಲೋ ಇಂದು ಏನಿದು ವೇಸ?

ಹೀಗೆ ಪ್ರಕೃತಿಯನ್ನು ಮೀರದೆ ಅದರಲ್ಲೆ ವಿವಿಧ ರೀತಿ ವಿಧ ವಿಧದ

ಶಕ್ತಿಗಳನ್ನು ಸಾಹಿತಿಗಳು ಹುಡುಕಿದ್ದಾರೆ.

ನವೋದಯ ಕವಿಗಳು ಪ್ರಕೃತಿಯ ಆರಾಧಕರಾಗಿದ್ದರು ಇದನ್ನೇ ಕಾವ್ಯದ ಮುಖ್ಯ ವಸ್ತುವನ್ನಾಗಿಸಿಕೊಂಡು ಬರೆದರು. ಮಾನವನ ಬದುಕಿನ ಸಂಘರ್ಷಗಳಿಗೆ ತಲ್ಲಣಗಳಿಗೆ ಪ್ರಕೃತಿಯಲ್ಲಿ ಅರ್ಥ ಶೋಧಿಸಿದರು. ಇದು ಇಂಗ್ಲೀಷ್‌ನ 'ರೋಮ್ಯಾಂಟಿಕ್' ಕವಿಗಳ ಅಂಧಾನುಕರಣೆಯಲ್ಲ. ಬ್ರಿಟೀಷರ ಆಗಮದಿಂದಾಗಿ ಭಾರತದಲ್ಲೂ ಕೈಗಾರಿಕರಣ, ನಗರೀಕರಣ, ಕ್ರಮೇಣ ಆರಂಭಗೊಂಡಿದ್ದವು. ಇದರ ಪರಿಣಾಮವಾಗಿ ಮಧ್ಯಮ ವರ್ಗ ಮೇಲು ಮಧ್ಯಮ ವರ್ಗ, ಬಡತನ, ಕೊಳಗೇರಿಗಳು ಹುಟ್ಟಿಕೊಂಡವು. ಯಾಂತ್ರಿಕ ಜೀವನ ಅಮಾನವೀಯಗಳು ನಮ್ಮಲ್ಲೂ ಕ್ರಮೇಣ ಕಾಣಲಾರಂಭಿಸಿದವು. ಮತ್ತೆ ಚೈತನ್ಯದ ಬದುಕಿಗಾಗಿ ಹುಡುಕಾಟ ಆರಂಭವಾದ ಸಂದರ್ಭದಲ್ಲಿ ಅಂದಿಗೆ ಉತ್ತರವಾಗಿ ಕಂಡದ್ದು ನಿಸರ್ಗ ಪ್ರಕೃತಿ ಮತ್ತು ಚೇತನತೆಯ ನಡುವೆ ಗಾಢ ಸಂಬಂಧವನ್ನು ಕಂಡುಕೊಂಡರು. ಕುವೆಂಪು ಅವರನ್ನು ಪ್ರಕೃತಿ ಕವಿ ಎಂದು ಕರೆದರು ಕಾರಣ– ಕುವೆಂಪು ಅವರು ಪ್ರಕೃತಿಯನ್ನು 'ತೆಗೆ ಜಡವೆಂಬುದು ಸುಳ್ಳು' ಎಂದು ಉದ್ಗರಿಸಿದರು ಈ ಮನೋಧರ್ಮ ಅಂದಿನ ಎಲ್ಲ ಕವಿಗಳಲ್ಲೂ ಕಾಣಬಹುದು

ಕುವೆಂಪು ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪೂರ್ವ ಪೀಠಿಕೆಯಂತೆ ರಚಿಸಿರುವ 'ಮಲೆನಾಡು' ಶೀರ್ಷಿಕೆ ಪದ್ಯ ಅವರ ಪರಿಸರ ಪ್ರೀತಿಯ– ಆರಾಧನೆಯ ಅತ್ಯುತ್ಕಟತೆಯನ್ನು ತೆರೆದಿಡುತ್ತದೆ.

"ಶ್ರೀವನಿತೆಗಿದು ಬೀಡು, ಸೊಬಗಿಗಿದು ಗೂಡು,
ಇದು ನಮ್ಮ ರಮಣೀಯ ಮಲೆಯನಾಡು
ಲಾವಣ್ಯದಾರಾಮವಿದು ಸುಖದ ಧಾಮ,
ಜನಮನೋತ್ಪಲಕಿದುವೆ ಪೂರ್ಣಸ್ತೋಮ!"
ಆನಂದದ ನಿವಾಸ, ಪುಣ್ಯಕಾವಾಸ,
ಋಷಿಗಳ ತಪೋವನಂ, ರಮ್ಯದೇಶ!
ಎಲ್ಲಿ ನೋಡಲು ಮನದ ಮೋಹಿಸುವ ವಸವ
ಸುಮತಲೆಯು ತುಂಬಿಹುದು ಕರೆದು ಜನವ!
ನಿನ್ನ ನೋಡದ ಹೃದಯರೆಹುದೆ ಸುಖುದುದಯ?
ಮಲೆನಾಡ, ಲಾವಣ್ಯದರ ಸಾಗೆ ಬೀಡೆ,
ಆನಂದ ನೀನಾಗಿ ಬೊಮ್ಮನಂ ನೀಗಿ
ಕರ್ನಾಟಕಿಳಿದಿರುವೆ ಮಲೆಯ ನಾಡಾಗಿ"

ಲೋಕದ ಸಕಲ ಸೌಂದರ್ಯ ಸಂಪತ್ತಿನಾಗರ ಇಲ್ಲಿಯೇ ಇದೇ ಎನ್ನುತ್ತಾರೆ ಕವಿ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಇದನ್ನು ಅಕ್ಷರಶಃ ಧಾರೆಯರೆದು ಪ್ರಕೃತಿ ಕಾಳಜಿಯನ್ನು ಮೆರೆದಿದ್ದಾರೆ.

ಕವಿಯೇ ಹೇಳುವಂತೆ ಇಲ್ಲಿ ಎಲ್ಲೆಲ್ಲೂ
ಹಸುರಾಗಸ ಹಸುರು ಮುಗಿಲು,
ಹಸುರುಗದ್ದೆಯೂ ಬಯಲು
ಹಸುರು ಸಂಜೆಯೀ ಬಿಸಿಲೂ!
ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪು ಹಸುರು;
ಹಕ್ಕಿಯ ಕೊರಲಿಂಪು ಹಸುರು
ಹಸುರು ಹಸುರಿನೆಳೆಯುಸಿರೂ!
ಕುವೆಂಪು ಪರಿಸರದ ದರ್ಶನಿಕರಾದದರಿಂದಲೇ ಅವರಿಗೆ
"ಪ್ರಕೃತಿಯೇ ಗುರು ಗಗನ ಲಿಂಗವು–
ಜಗವೇ ಕೂಡಲ ಸಂಗಮ
ಹುಡಿಯೇ ಭಸ್ಮವು ಹುಲ್ಲೇ ಪತ್ರಿಯು
ಜಡವಿದೆಲ್ಲವೂ ಜಂಗಮ"ವಾಗಿ ಆವಾಹನೆಯಾಯಿತು. ಇದರಿಂದ ಬಹಿರಂಗದ ಚೆಲುವು ಅಂತರಂಗದ ಉಲವಾಗಿ, ಬಲವಾಗಿ ಅದುವೇ ಗೆಲುವಾಗಿ ತೋರಿತು. ಇದನ್ನವರು ನಿರ್ವಚನೆಯಿಂದ ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ ದಾಖಲಿಸಲು ಸಾಧ್ಯವಾದದ್ದು ಕುವೆಂಪು ಅವರ ಬಹುಪಾಲು ಕೃತಿಗಳು– ಕಾನೂರು ಸುಬ್ಬಮ್ಮ ಹೆಗ್ಗಡತಿಯಲ್ಲಿ ಕಾವ್ಯ, ಕತೆ–ಗೀತೆಗಳು ಸಾಗುವುದೇ ಅವರ ಅಪರಿಮಿತ ಪರಿಸರ ಪ್ರಜ್ಞೆಯ ಪಾತಳಿಯ ಮೇಲೆಯೇ ಕತೆಗೆ ಬೇಕಾದ ಪರಿಕರ ಸಾಮಗ್ರಿಗಳನ್ನು ಸಮಾಜದಿಂದ ಎತ್ತಿಕೊಳ್ಳುತ್ತಲೇ ಒಂದಲ್ಲ ಒಂದು ಬಗೆಯಲ್ಲಿ ತಮ್ಮ ಮಹಾನ್ ಸ್ವಪ್ನ ಸಮ್ರಾಜ್ಯವಾದ ಉಸಿರಿನ ಕಣವೂ ಋಣವೂ ಆದ ಮಲೆನಾಡ ಮೈಸಿರಿಯಲ್ಲಿ ಅದ್ದಿ ತೆಗೆಯುತ್ತಾರೆ. ಇದಕ್ಕೆ ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವೂ ಹೊರತಲ್ಲ. ಈ ಬಗೆಯ ಜಿಜ್ಞಾಸೆ ನಡೆಯಲು ಸಾಕಷ್ಟು ಸರಕಿದೆ, ಅಧ್ಯಯನ ಸಾಗಬೇಕು. ಕೊನೆಗೊಂದು ಮಾತು; ನಾಡೋಜ ಹಂಪನಾ ಅವರ ಮಹಾಕಾವ್ಯದ ನಾಯಕ ಚಾರುದತ್ತ ಬೇಟೆಗೆ ಹೋಗಿದ್ದಾನೆ. ಆತನ ಸ್ನೇಹಿತರು ಆಯುಧ ಝಳಪಿಸಿ ಕಾನನದ ಹನನ ಕ್ರಿಯೆಯಲ್ಲಿದ್ದಾರೆ. ಆಗ ಆತ ಹೇಳುತ್ತಾನೆ.

"ನಿಲ್ಲಿ ಗೆಳೆಯರೆ ತಾಳ್ಮೆಯಿರಲಿ, ಏಕಿಂತು ಕೈದುಗಳ
ಮೇಲೆತ್ತುವಿರೀ ಪ್ರಾಣಿ ಸಂಕುಲ ವಿನಾಶಕೆ?
ಸಸ್ಯ ಶ್ಯಾಮಲೆಯ ಸಮೃದ್ಧಿಯೇ ದೈವ ಕೃಪೆಯ್ಯೆ!
ಪ್ರಾಣಿಗಳುಳಿದರುಳಿದೀತು ಗಟ್ಟಿಯೀ ಪೃಥ್ವಿಯ್ಯೆ
ಪಕ್ಷಿಗಳುಲಿಯು ಉಳಿದರುಳಿಯುವೆವು ನೆಮ್ಮದಿ ನಮಗೆ
ನೆಲ ನೀರು ಗಾಳಿ ಬೆಳಕು ಎಲ್ಲದಕು ತಳಕುಂಟು
ಮರೆಯದಿರಿ ಪ್ರಕೃತಿಯನುಸುವೀ ಬೀಜ ಮಂತ್ರ
ಒಂದು ಮರ ಕಡಿಯಲು ನೆಟ್ಟಿರಬೇಕು ಎರಡು ಗಿಡ
ತಂತ್ರ."

ಮನುಷ್ಯನ ದುರುಳತನಕ್ಕೆ ಎಲ್ಲವೂ ಬಲಿಯಾಗಿದೆ ಅದರಲ್ಲಿ ಅಗ್ರಸ್ಥಾನದಲ್ಲಿರುವುದೇ ಈ ಪ್ರಕೃತಿ– ಪರಿಸರ ಮಿತಿ ಮೀರಿದ ಜನಸಂಖ್ಯಾ ಸ್ಫೋಟ, ಲೋಲುಪತೆಯ ಕೈಗಾರೀಕರಣ, ಇರುವುದೊಂದೇ ಭೂಮಿ ಎಂಬ ತಿಳುವಳಿಕೆಯ ಜಾಣಕೊರತೆ, ಪರಿಣಾಮ ಓಝೋನ್ ಪರದೆಯ ಧ್ವಂಸ, ಅಲ್ಲಲ್ಲಿನ ಮಿನಿ ಪ್ರಳಯ, ಅಧಿಕ ಉಷ್ಣಾಂಶ, ಜಲಪ್ರವಾಹ ಇತ್ಯಾದಿ.. ಇವನ್ನು ತಡೆಯುವ ಕೆಲಸ–ಕಾರ್ಯಗಳು ವಿಶ್ವಾದ್ಯಂತ ನಡೆದಿವೆ. ಆದರೆ ಅಮೂಲಾಗ್ರವಾಗಿಲ್ಲ ಸ್ಟಾಕ್ ಹೋಂನಲ್ಲಿ ನಡೆದ 'ಮಾನವ ಪರಿಸರ' ಅಂತರಾಷ್ಟ್ರೀಯ ಸಮ್ಮೇಳನ (೧೯೭೨) ಭಾರತದ ಅಲಹದಬಾದ್‌ನಲ್ಲಿ ನಡೆದ ಕ್ರಾಂತಿಕಾರಕ 'ಚಿಪ್ಕೋ' (ಮರ ಕಡಿಯ ಬೇಡಿ) ಚಳುವಳಿ ಅದರ ಬೆನ್ನಲ್ಲೇ "ಅಪ್ಪೋ" ಹೋರಾಟ(೧೯೭೪) ಭಾರತ ಸರ್ಕಾರದ ಸಾಮಾಜಿಕ ಅರಣ್ಯ ಯೋಜನೆ(೧೯೮೦) 'ನರ್ಮದಾ ಬಚಾವೋ' ಆಂದೋಲನ (ನರ್ಮದಾ ಆಂದೋಲನದ ನಾಯಕಿ ಮೇದಾ ಪಾಟ್ಕರ್), ನಂದಿಕೂರು ಜಲಜಾಗೃತಿ ಸಮಿತಿಯ ಕೊಜೆಂಟ್ರಿಕ್ಸ್ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರಗಳ ವಿರುದ್ಧದ ಜನ ಜಾಗೃತಿ ಸಭೆ (ಡಾ॥ ಶಿವರಾಮ ಕಾರಂತರ ಭಾಷಣ– ೧೯೯೭) ಇತ್ಯಾದಿ ಇತ್ತೀಚೆಗೆ ಕರ್ನಾಟಕದಾದ್ಯಂತ ಹತ್ತಾರು ಸಂಘ ಸಂಸ್ಥೆಗಳು ಹುಟ್ಟಿಕೊಂಡು ಪರಿಸರ ಸಂರಕ್ಷಣೆಯ ಕಾರ್ಯಕ್ಕೆ ಕಂಕಣ ಬದ್ಧವಾಗಿವೆ. ಪ್ರೊ॥ ಎಂ.ಡಿ. ನಂಜುಂಡ ಸ್ವಾಮಿಯವರ 'ರೈತ ಸಂಘವು' ರೈತರ ಹಿತರಕ್ಷಣೆಯ ಉದ್ದೇಶದೊಂದಿಗೆ ಜನ್ಮತಳೆಯದಿದ್ದರೂ ನಾಡಿನ ನೆಲ–ಜಲ ಪರಿಸರ ಸಂರಕ್ಷಣೆಯ ಪಾರ್ಶ್ವಿಕ ಜವಾಬುದಾರಿಗಳನ್ನು ಅದು ನಿರ್ವಹಿಸಿದೆ ಈ ನಿಟ್ಟಿನಲ್ಲಿ 'ಹಸಿರು ಸೇನೆ'ಗೂ ಹೊಣೆಗಾರಿಕೆಗಳಿವೆ "ಮಲೆನಾಡ ಸಂರಕ್ಷಣಾ ವೇದಿಕೆ" ಯಂಥ ಪ್ರಾದೇಶಿಕವಾರು ಸಂಘ ಸಂಸ್ಥೆಗಳೂ ತಮ್ಮ

ಬದ್ಧತೆ ಪ್ರದರ್ಶಿಸುತಿವೆ. ತೇಜಸ್ವಿ ಮತ್ತವರ ಬರಹಗಳು ಪರಿಸರಕ್ಕೆ ಚೇತನ ತರುವಂತೆ ಕಾರ್ಯವೆಸಗಿವೆ. ಈಗ ಕಡಿದಾಳ್ ಶ್ಯಾಮಣ್ಣ ಮತ್ತು ಅವರ ಆಪ್ತ ವಲಯ ಸೂಕ್ತ ವೇದಿಕೆಗಳನ್ನು ಕಲ್ಪಿಸುವ ಮೂಲಕ ಪರಿಸರ ಪ್ರಜ್ಞೆಯ ಕುರಿತು ಜಾಗೃತಿ ಮೂಡಿಸುತ್ತಿರುವುದು ಹರ್ಷದಾಯಕ.

ಆದಿ ಕವಿ ವಾಲ್ಮೀಕಿಯಾದಿ ಕನ್ನಡದ ಕವಿಪುಂಗವರೂ ತಂತಮ್ಮ ಮಿತಿಯಲ್ಲಿ ಪರಿಸರ ಕಾಳಜಿಯಿಂದ ಹಿಂದೆ ಸರಿದಿಲ್ಲ. ಆದಿ ಕವಿ ಪಂಪನಂತೂ ಬನವಾಸಿಯನ್ನೇ ಮೈದುಂಬಿ ಕೊಂಡಂತೆ ತನ್ನ ವಿಕ್ರಮಾರ್ಜುನ ವಿಜಯ ಲೌಕಿಕ ಕಾವ್ಯದಲ್ಲಿ " ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್' ಎಂದು ಮಧು ಮಹೋತ್ತವದೊಡೊಡ ಮೇನನೆಂಬೆನಾ ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂತಲೂ ಪ್ರಕೃತಿಯ ಪರಮಾರಾಧನೆಯನ್ನು ಮೆರೆದಿದ್ದಾನೆ. ವಚನಕಾರರು ಮತ್ತೊಂದು ಹೆಜ್ಜೆ ಮುಂದಿಟ್ಟು ತಿಳಿಯಾದ ಅಚ್ಚಗನ್ನಡದಲ್ಲಿ 'ಪ್ರಕೃತಿ-ದೇಹ ಪ್ರಕೃತಿ'ಯ ಅವಿನಾಭಾವ ಸಂಬಂಧವನ್ನು ಬಿಡಿಸಿಟ್ಟು ವಿಶ್ವ ಮಾದರಿಯಾಗಿದ್ದಾರೆ. ಅಕ್ಕಮಹಾದೇವಿ ವಿಶೇಷವಾಗಿ ಬಸವಣ್ಣ. ಈ ಬಗೆಗೆ ಚಿಂತನೆ ನಡೆಸಿದ್ದು ಗಮನಾರ್ಹ ಬಸವಣ್ಣ "ಮರಗಿಡಬಳ್ಳಿ ಧಾನ್ಯಂಗಳ ಬೆಳೆಸಲ್ಲವ ತಂಚಂದು.

> ಪ್ರಾಣವ ಕೊಂಡುಂಡು ಶರೀರರವ ಹೊರೆವ ದೋಷಕ್ಕೆ
> ಇನ್ನಾವುದು ವಿಧಿಯಯ್ಯ?..." ಎಂದು

ಕೇಳುತ್ತಲೇ ಮರ ಗಿಡ ಬಳ್ಳಿ ಧಾನ್ಯ ಅವುಗಳ ಬೆಳೆಸೆಲ್ಲವನ್ನೂ ಕತ್ತರಿಸಿ ಕಡಿದು ತೆಗೆದುಕೊಂಡು ಉಂಡು ಶರೀರ ಪೋಷಿಸುವ ಈ ಹಿಂಸೆಗೆ ಪರಿಣಾಮವೇನು ಗೊತ್ತೇ? ಸರ್ವನಾಶ! ಎಂದು ಎಚ್ಚರಿಸುತ್ತಾರೆ. ಈ ನಿಟ್ಟಿನಲ್ಲಿ ಜನಪದದ್ದು ದೊಡ್ಡ ಕೊಡುಗೆ. ಆಧುನಿಕ ಕನ್ನಡ ಸಾಹಿತ್ಯ ಈ ಬಗೆಗೆ ಸಾಕಷ್ಟು ಮಾತಾಡಿದೆ ಅದರಲ್ಲಿ ತ್ರಿಕರಣ ಪೂರ್ವಕವಾಗಿ ಮಹಾ ಕವಿ ಕುವೆಂಪು, ಬೇಂದ್ರೆ, ರಾವ್‌ಬಹದ್ದೂರ್ (ಗ್ರಾಮಾಯಣ) ಆಲನಹಳ್ಳಿ ಕೃಷ್ಣ (ಕಾಡು) ಕಾರಂತ (ಬೆಟ್ಟದ ಜೀವ) ಮಿರ್ಜಿ ಅಣ್ಣಾರಾಯ (ನಿಸರ್ಗ) ಬಿ.ಜಿ.ಎಲ್ ಸ್ವಾಮಿ (ಹಸುರು ಹೊನ್ನು) ಮಾಸ್ತಿಯವರ (ಕತೆಗಳು) ಗೋಕಾಕರು, ನಿಸರ್ಗ ಕವಿ ನಿಸಾರ್ ಅಹಮ್ಮದ್ ಮುಂತಾದವರು ಮುಖ್ಯರಾಗಿದ್ದಾರೆ. ಕಂಬಾರರ ಕತೆ, ಕವಿತೆ ಮತ್ತು ಕಾದಂಬರಿಗಳಲ್ಲಿ ಹಸುರು ಪರ್ಯವರಣ ಹಾಸು ಹೊಕ್ಕಿರುವುದನ್ನು ಈ ಸಂದರ್ಭದಲ್ಲಿ ನೆನೆಯದೇ ಹೋದರೆ ಪ್ರಸ್ತುತ ವಿಷಯವೇ ಅಪೂರ್ಣ ಉದಾ: ಸಿಂಗಾರೆವ್ವ ಮತ್ತು ಅರಮನೆ, ಕರಿಮಾಯಿ, ಇತ್ಯಾದಿ.

**ಆಧಾರ ಗ್ರಂಥಗಳು**


1. ಕೊರಳು-ಕೊಳಲು: ಜಿ.ಎಸ್. ಅಮೂರ
2. ಕನ್ನಡ ಸಾಹಿತ್ಯ ಚರಿತ್ರೆ: ತಾ.ಸು. ಶಾಮರಾಯ
3. ಹೊಸಗನ್ನಡ ಸಾಹಿತ್ಯ: ಎಲ್.ಎಸ್ ಶೇಷಗಿರಿರಾವ್
4. ಕನ್ನಡ ಕಾವ್ಯ ಸಮಾಜ ಸಂಸ್ಕೃತಿ: ಲೋಕೇಶ್ ಅಗಸನಕಟ್ಟೆ
5. ನೆನಪಿನ ದೋಣಿಯಲ್ಲಿ: ಕುವೆಂಪು ಪು. ೩೯ ಮತ್ತು ೫೦೦
6. ಅದೇ ಪು ೭೨-೭೩
7. ಅದೇ ಪು ೩-೪
8. ಕದಂಬ- ಪ್ರಭಸ ಬಿಡುಗಡೆ ಮದುರೈ ೧೯೯೮- ಪು ೧೪೭
9. ಮಲೆಗಳಲ್ಲಿ ಮದುಮಗಳು, ಪು ೭೧೨
10. ಚಾರುವಸಂತ- (ಮಹಾಕಾವ್ಯ) ನಾಡೋಜ ಹಂಪನಾ
11. ಚಂಪಾಂಕಣ- ಪೊ. ಚಂದ್ರಶೇಖರ್ ಪಾಟೀಲ್
12. ಮಲೆಗಳಲ್ಲಿ ಮದುಮಗಳು- ಪು. ಓದುಗಾರಿಕೆ ಕೊನೆಯ ನಾಲ್ಕು ಸಾಲು
13. ಕೊರಳು-ಕೊಳಲು: ಜಿ.ಎಸ್. ಅಮೂರ
14. ಕನ್ನಡ ಸಾಹಿತ್ಯ ಚರಿತ್ರೆ: ತಾ.ಸು. ಶಾಮರಾಯ
15. ಹೊಸಗನ್ನಡ ಸಾಹಿತ್ಯ: ಎಲ್.ಎಸ್ ಶೇಷಗಿರಿರಾವ್
16. ಕನ್ನಡ ಕಾವ್ಯ ಸಮಾಜ ಸಂಸ್ಕೃತಿ: ಲೋಕೇಶ್ ಅಗಸನಕಟ್ಟೆ
17. ಅಂತರ್ಜಾಲ ವಿಕಿಪೀಡಿಯಾ
18. ಕನ್ನಡ ಸಾಹಿತ್ಯ ಸಂಸಕೃತಿ ಕೋಶ- ಡಾ॥ ಚಿ.ಸಿ. ನಿಂಗಣ್ಣ
19. ಹುಣಸಿಮರ ಮತ್ತು ದ್ಯಾಮವ್ವ- ಡಾ॥ ಪ್ರಕಾಶ ಹಲಗೇರಿ: